# <u>ಜೆ.ಎಂ.ಎಫ್.ಸಿ. ನ್ಯಾಯಾಲಯ, ಸಿದ್ದಾಪುರ</u>

ಸಿ.ಸಿ ನಂಃ 794/2023

ಸಿಡಬ್ಲ್ಯೂಃ 3 ಪಿಡಬ್ಲ್ಯೂಃ 2

| | |
|---|---|
| ಹೆಸರುಃ | ಗಣಪತಿ ಪರಮೇಶ್ವರ ಹೆಗಡೆ |
| ತಂದೆ/ಗಂಡನ ಹೆಸರುಃ | ಪರಮೇಶ್ವರ ಹೆಗಡೆ |
| ವಯಸ್ಸುಃ | 52 ವರ್ಷ |
| ಉದ್ಯೋಗಃ | ಕೃಷಿ |
| ವಾಸಃ | ಗದ್ದೆ ಮನೆ, ಸಿದ್ದಾಪುರ |

ಸಾಕ್ಷಿಗೆ ಪ್ರಮಾಣ ವಚನವನ್ನು ದಿಃ 20-03-2025 ರಂದು ಬೋಧಿಸಲಾಯಿತು.

**<u>ಮುಖ್ಯ ವಿಚಾರಣೆಃ ಮಾನ್ಯ ಎ.ಪಿ.ಪಿ. ರವರಿಂದಃ</u>**

ದಿಃ 20-08-2023 ರಂದು ಚಾಸಾ-1 ರವರು ಗದ್ದೆಮನೆಯಲ್ಲಿರುವ ಅವರ ಮನೆಯ ಎದುರಿಗೆ ನನ್ನನ್ನು ಕರೆದಿರುತ್ತಾರೆ. ನಾನು ಅಲ್ಲಿಗೆ ಹೋದಾಗ ಪೋಲಿಸರು ಹಾಗೂ ಚಾಸಾ-2 ರವರು ಇದ್ದರು. ಚಾಸಾ-1 ರವರು ನನಗೆ ಆರೋಪಿಯು ಚಾಸಾ-4 ರವರಿಗೆ ಹೊಡೆದಿರುತ್ತಾರೆ ಎಂದು ತಿಳಿಸಿದ್ದು, ಘಟನೆಯ ಸ್ಥಳವನ್ನು ನನಗೆ ತೋರಿಸಿರುತ್ತಾರೆ. ಆ ಕಾಲಕ್ಕೆ ಪಂಚನಾಮೆಯನ್ನು ಮಾಡಿದ್ದು, ಭಾವಚಿತ್ರಗಳನ್ನು ತೆಗೆದಿರುತ್ತಾರೆ. ಅಲ್ಲಿಯೆ ಬಿದ್ದಿದ್ದ ಒಂದು ಛತ್ರಿಯನ್ನು, ಒಂದು ನೀಲಿ ಬಣ್ಣದ ಅಂಗಿ ಹಾಗೂ ಬಿಳಿ ಬಣ್ಣದ ಬನಿಯನ್ ನ್ನು ಜಪ್ತುಪಡಿಸಿಕೊಂಡಿದ್ದರು. ಸದರಿ ಮುದ್ದೆಮಾಲುಗಳನ್ನು ಚಾಸಾ-1 ರವರ ಕೊಟ್ಟಿರುತ್ತಾರೆ.

ಸಾಕ್ಷಿ ನಿ.ಪಿ-2 ಹಾಗೂ ನಿ.ಪಿ-3 ರಲ್ಲಿರುವ ತನ್ನ ಸಹಿಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಕ್ರಮವಾಗಿ ನಿ.ಪಿ-2(ಬಿ) ಮತ್ತು ನಿ.ಪಿ-3(ಬಿ) ಎಂದು ಗುರುತಿಸಲಾಯಿತು. ಸಾಕ್ಷಿಯು ನಿ.ಪಿ-4 ರಿಂದ ನಿ.ಪಿ-7 ಭಾವಚಿತ್ರಗಳಲ್ಲಿ ತನ್ನನ್ನು ನೋಡಿ ಗುರುತಿಸಿರುತ್ತಾರೆ. ಸಾಕ್ಷಿ ನ್ಯಾಯಾಲಯದ ಮುಂದೆ ಇರುವ ಮು.ಮಾ-1 ರಿಂದ 3 ನ್ನು ನೋಡಿ ಗುರುತಿಸಿರುತ್ತಾರೆ.

**<u>ಪಾಟೀ ಸವಾಲುಃ ಆರೋಪಿ ಪರ ಶ್ರೀ ಆರ್ ಎಸ್ ಎಚ್ ವಕೀಲರಿಂದಃ</u>**

ನನಗೆ ಘಟನೆ ಆದ ಬಗ್ಗೆ ದಿಃ 19-08-2023 ರಂದು ಗೊತ್ತಾಗಿರುತ್ತದೆ. ಗದ್ದೆಮನೆಯಲ್ಲಿ ಪಿರ್ಯಾದಿ ಹಾಗೂ ಆರೋಪಿತನ ಮನೆ ಹೊರತುಪಡಿಸಿ ಬಹಳಷ್ಟು ಮನೆಗಳು ಇರುತ್ತವೆ. ನಾನು 108 ಆಂಬ್ಯೂಲೆನ್ಸ ಗೆ ದೂರವಾಣಿ ಕರೆ ಮಾಡಿ ಕರೆಸಿರುವುದಿಲ್ಲ. ನಾನು ಚಾಸಾ-4 ರವರ ಜೊತೆಗೆ ಆಸ್ಪತ್ರೆಗೆ ಬಂದಿರಲಿಲ್ಲ. ನಾನು ಪೋಲೀಸ ಠಾಣೆಗೆ ದೂರನ್ನು ಕೊಡಲು ಹೋಗಿದ್ದೆ. ನಿ.ಪಿ-1 ದೂರನ್ನು ನಾನು

ಬರೆದಿರುತ್ತೇನೆ. ನಿ.ಪಿ-1 ದೂರನ್ನು ನಾನು ಬರೆದಿರುತ್ತೇನೆ ಎಂದು ಸಹಿ ಮಾಡಿರುವುದಿಲ್ಲ. ನಾನು ಹಾಗೂ ಚಾಸಾ-1 ಮತ್ತು ಚಾಸಾ-4 ರವರು ನಮ್ಮ ಊರಿನವರು. ಪೋಲೀಸ ಠಾಣೆಗೆ ನನ್ನೊಂದಿಗೆ ಯಾರು ಯಾರು ಬಂದಿದ್ದರು ಎಂದು ನನಗೆ ನೆನಪಿಲ್ಲ. ನಿ.ಪಿ-1 ದೂರನ್ನು ಯಾರ ಹೇಳಿಕೆ ಪ್ರಕಾರ ಬರೆದಿರುತ್ತೆನೆ ಎಂದು ನನಗೆ ನೆನಪಿಲ್ಲ. ನಿ.ಪಿ-1 ರಲ್ಲಿ ಏನು ಬರೆಯಲಾಗಿದೆ ಎಂದು ನನಗೆ ಗೊತ್ತಿಲ್ಲ. ಪಂಚನಾಮೆಗೆ ಬರಲು ಪೋಲೀಸರು ನನಗೆ ಹೇಳಿರುವುದಿಲ್ಲ. ನಿ.ಪಿ-2 ಪಂಚನಾಮೆಯನ್ನು ನಾನು ಹೇಳಿ ಬರೆಸಿರುವುದಿಲ್ಲ. ಪೋಲೀಸರ ಹೇಳಿಕೆ ಪ್ರಕಾರ ನಾನು ನಿ.ಪಿ-2 ಕ್ಕೆ ಸಹಿ ಮಾಡಿರುತ್ತೇನೆ.

ಮು.ಮಾ-1 ಕೊಡೆಯು ಆರೋಪಿತನ ಮನೆಯ ಮುಂದೆ ಇರುವ ಗದ್ದೆಯಲ್ಲಿ ಬಿದ್ದಿತ್ತು. ನಿ.ಪಿ-4 ರಿಂದ 7 ಭಾವಚಿತ್ರಗಳನ್ನು ತೆಗೆಯುವ ಕಾಲಕ್ಕೆ ಕೊಡೆ ಇಲ್ಲಿ ಇತ್ತು ಎಂದು ನನಗೆ ಗೊತ್ತಿಲ್ಲ. ಘಟನಾ ಸ್ಥಳವವು ಆರೋಪಿತನ ಮನೆ ಕಾಂಪೌಂಡ್ ನ ಹೊರಗೆ ಇರುತ್ತದೆ. ಘಟನಾ ಸ್ಥಳದ ಅಕ್ಕಪಕ್ಕದಲ್ಲಿ ಕಾಡು ಇರುತ್ತದೆ ಎಂದರೆ ಸರಿ. ಘಟನಾ ಸ್ಥಳದಿಂದ ಪಿರ್ಯಾದಿಯ ಮನೆವರೆಗೂ ಬಹಳಷ್ಟು ಮನೆಗಳು ಇರುತ್ತವೆ ಎಂದರೆ ಸರಿ. ನಾನು ಘಟನೆಯನ್ನು ನೋಡಿಲ್ಲ. ನನ್ನ ಮನೆಯಿಂದ ಚಾಸಾ-1 ರವರ ಮನೆ 700 ಮೀ ದೂರ ಇರುತ್ತದೆ. ಚಾಸಾ-1 ರವರ ಮನೆ ಪಕ್ಕದಲ್ಲಿ ಚಾಸಾ-2 ರವರ ಮನೆ ಇರುತ್ತದೆ. ಆರೋಪಿಯ ಮನೆಯ ಗೇಟ್ ಬಳಿ ಮು,ಮಾ-2 ಮತ್ತು 3 ಬಿದ್ದಿತ್ತು. ಚಾಸಾ-1 ರವರ ಸೊಸೆ ಕೈಯಲ್ಲಿ ಮು.ಮಾ-2 ಮತ್ತು 3 ಇತ್ತು. ನಿ.ಪಿ-3 ನ್ನು ನಾನು ಹೇಳಿ ಬರೆಸಿರುವುದಿಲ್ಲ. ಘಟನಾ ಸ್ಥಳದಲ್ಲಿ ತೆಂಗಿನ ಕಾಯಿ ಬಿದ್ದಿರುವುದು ಕಂಡುಬಂದಿರುವುದಿಲ್ಲ. ಯಾವ ಕಾರಣಕ್ಕೆ ಜಗಳ ಆಗಿರುತ್ತದೆ ಎಂದು ನನಗೆ ಪಂಚನಾಮೆ ಕಾಲಕ್ಕೆ ಹೇಳಿರುವುದಿಲ್ಲ. ನಾನು ಪಂಚನಾಮೆ ಹೋದಾಗ ಅಲ್ಲಿ ಚಾಸಾ-1, ಆಕೆಯ ಸೊಸೆ ಹಾಗೂ ಚಾಸಾ-3 ರವರು ಇದ್ದರು. ಚಾಸಾ-4 ರವರು ವಯೊವೃದ್ದರಾದ ಕಾರಣ ಅವರು ಆಗಾಗ ಬಿದ್ದು ಪೆಟ್ಟು ಮಾಡಿಕೊಳ್ಳುತ್ತಾರೆ ಎಂದರೆ ಗೊತ್ತಿಲ್ಲ. ಘಟನಾ ಸ್ಥಳದ ಚೆಕ್ಕುಬಂದಿ ನನಗೆ ಗೊತ್ತಿಲ್ಲ. ನಾನು ಪಂಚನಾಮೆ ಕಾಲಕ್ಕೆ ಹೋಗಿರುವುದಿಲ್ಲ ಹಾಗೂ ಆ ಕಾಲಕ್ಕೆ ಯಾವುದೇ ವಸ್ತುಗಳನ್ನು ಜಪ್ತುಪಡಿಸಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ಚಾಸಾ-1 ಮತ್ತು 4 ನನಗೆ ಬೇಕಾದವರಿಂದ ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೆನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ** ಇರುವುದಿಲ್ಲ.

(ನನ್ನ ಹೇಳಿಕೆ ಪ್ರಕಾರ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

**ಓ.ಹೇ.ಕೇ ಸರಿ ಇದೆ.**

**ಸಹಿ ಇದೆ.**

**ಜೆ.ಎಂ.ಎಫ್.ಸಿ, ಸಿದ್ದಾಪುರ.**